# ನಂಬಿಕೆಯ ಒಳಹೊರಗೆ

ಮನುಷ್ಯನ ಜೀವನ ನಿಂತಿರುವುದು ನಂಬಿಕೆಗಳ ತಳಹದಿಯ ಮೇಲೆ. ನಾಳೆಯ ಕುರಿತ ನಂಬಿಕೆ ಈ ಕ್ಷಣದ ಸವಾಲುಗಳನ್ನು ಎದುರಿಸಲು ವ್ಯಕ್ತಿಯನ್ನು ಸಜ್ಜುಗೊಳಿಸುತ್ತದೆ. ನಂಬಿಕೆ ಕಳೆದುಕೊಂಡಾಗ ಬದುಕು ಕುಸಿಯುತ್ತದೆ. ನಂಬಿಕೆಯೊಂದು ಹುಸಿಯಾದಾಗಲೂ, ಹೊಸತೊಂದು ನಂಬಿಕೆಯ ಚಿಗುರು ಕುಸಿದ ಬದುಕನ್ನು ಮತ್ತೆ ಕಟ್ಟಿಕೊಳ್ಳಲು ಇಂಧನವಾಗುತ್ತದೆ.

ಮನುಷ್ಯ ಮತ್ತೊಬ್ಬ ಮನುಷ್ಯನನ್ನು ನಂಬುತ್ತಾನೆ. ದೇವರನ್ನೂ ನಂಬುತ್ತಾನೆ. ತಾನು ನಂಬಿದವರು ತಪ್ಪಿ ನಡೆದು, ನಂಬಿಕೆಗೆ ಚ್ಯುತಿಯಾದಾಗ ಗಾಸಿಗೊಳ್ಳುತ್ತಾನೆ. ದೇವರ ಕುರಿತ ನಂಬಿಕೆ ಕೈಕೊಟ್ಟಾಗಲೂ ತಲ್ಲಣಗೊಳ್ಳುವುದಿದೆ. ಆದರೆ, ಭರವಸೆ ಹುಸಿಯಾದಾಗಲೂ ದೇವರೊಂದಿಗಿನ ನಂಬಿಕೆ ನವೀಕರಣಗೊಳ್ಳುತ್ತಲೇ ಇರುತ್ತದೆ. ನಂಬಿಕೆ ಉಳಿಸಿಕೊಳ್ಳಲು ದೇವರಿಗೆ ದೊರೆತಷ್ಟು ಅವಕಾಶ ಮನುಷ್ಯರಿಗೆ ದೊರೆಯುವುದಿಲ್ಲ. ನಂಬಿಕೆ ಉಳಿಸಿಕೊಳ್ಳುವ ನಿಟ್ಟಿನಲ್ಲಿ ಅಗ್ನಿಪರೀಕ್ಷೆ ಮನುಷ್ಯನಿಗೇ ಹೊರತು ದೇವರಿಗಲ್ಲ. ತನ್ನ ನಂಬಿಕೆಗಳು ಹುಸಿಯಾಗಬಾರದು ಎಂದು ಹಂಬಲಿಸುವ ವ್ಯಕ್ತಿ, ತನ್ನ ಕುರಿತ ಇತರರ ನಂಬಿಕೆಗಳನ್ನು ಕಾಪಾಡುವ ಸವಾಲನ್ನೂ ಎದುರಿಸಬೇಕಾಗುತ್ತದೆ.

ವ್ಯಕ್ತಿಗಳ ನಡುವಿನ ನಂಬಿಕೆಗಳಿಗಿಂತಲೂ ದೇವರ ಬಗೆಗಿನ ನಮ್ಮ ನಂಬಿಕೆ ಗಾಢವಾದುದು. 'ಎಲ್ಲವೂ ದೇವರಿಗೆ ಗೊತ್ತು', 'ದೇವರಿಗೆ ಎಲ್ಲವನ್ನೂ ಬಿಟ್ಟಿರುವೆ' ಎನ್ನುವಂಥ ಮಾತುಗಳ ಹಿಂದೆ ಇಣುಕುವುದು ಮನುಷ್ಯನ ಬಗೆಗಿನ ಅಪನಂಬಿಕೆಯಲ್ಲಿ ಹುಟ್ಟಿರುವ ದೇವರ ಕುರಿತ ನಂಬಿಕೆ. ಆದರೆ, ಸಮಾಜಜೀವಿಯೊಬ್ಬ ಮನುಷ್ಯರ ಮೇಲೆ ನಂಬಿಕೆ ಕಳೆದುಕೊಂಡು ದೈವದ ನಂಬಿಕೆಯಲ್ಲಿ ಜೀವಿಸುವುದು ಸಾಧ್ಯವಿಲ್ಲ. ಅಂಥ ಬದುಕು ಯಾಂತ್ರಿಕ ಹಾಗೂ ರಸಹೀನವಾದುದು.

ಸಹಜೀವಿಗಿಂತಲೂ ಮಿಗಿಲಾಗಿ ದೇವರನ್ನು ನಂಬುವವರು ಇರುವಂತೆಯೇ ಆತ್ಮಸಾಕ್ಷಿಯನ್ನು ದೇವರ ರೂಪದಲ್ಲಿ ನಂಬುವವರೂ ಇದ್ದಾರೆ. ಇಂಥ ನಂಬಿಕೆಗಳು ಜನಸಾಮಾನ್ಯರ ದೃಷ್ಟಿಯಿಂದ ಅಡ್ಡಿಯಿಲ್ಲ. ಆದರೆ, ಜನನಾಯಕರು ಹೀಗೆ ಹೇಳಬಾರದು. ಅವರ ನಂಬಿಕೆ ಇರಬೇಕಾದುದು ಜನಸಾಮಾನ್ಯರಲ್ಲಿ. ದೈವದೊಂದಿಗಿನ ತನ್ನ ನಂಬಿಕೆಯ ಬಗ್ಗೆ ಜನನಾಯಕನೊಬ್ಬ ಹೆಚ್ಚು ಮಾತನಾಡುತ್ತಾನೆಂದರೆ, ಜನಸಾಮಾನ್ಯರ ಕುರಿತ ಅವನ ಕಾಳಜಿ ಪ್ರಶ್ನಾರ್ಹ. 'ಆತ್ಮಸಾಕ್ಷಿಗೆ ತಕ್ಕಂತೆ ನಡೆದುಕೊಳ್ಳುತ್ತೇನೆ' ಎನ್ನುವ ನಾಯಕನೂ ಅನುಮಾನಕ್ಕೆ ಅರ್ಹ. ಜನರನ್ನು ಪ್ರತಿನಿಧಿಸುವ ವ್ಯಕ್ತಿಗಳಿಗೆ ಜನರೇ ಪ್ರತ್ಯಕ್ಷ ದೈವ. ಜನರೇ ಅವರ ಆತ್ಮ, ಆತ್ಮಸಾಕ್ಷಿ. ಅವರ ಮೊದಲ ನಂಬಿಕೆ ಹಾಗೂ ಉತ್ತರದಾಯಿತ್ವ ಜನರಿಗೇ ಹೊರತು ದೈವಕ್ಕಲ್ಲ ಎನ್ನುವ ನಂಬಿಕೆಯೇ 'ಜನಸೇವೆಯೇ ಜನಾರ್ದನ ಸೇವೆ' ಎನ್ನುವ ಮಾತಿನಲ್ಲೂ ಇದೆ.

ಸಮಾಜದೊಂದಿಗೆ ತಮ್ಮ ಬದುಕನ್ನು ಬೆಸೆದುಕೊಂಡ ಪ್ರಾತಃಸ್ಮರಣೀಯರೆಲ್ಲ ಜನಸಾಮಾನ್ಯರ ನಂಬಿಕೆಗೆ ಬದ್ಧರಾಗಿಯೇ ಬಾಳಿದ್ದಾರೆ. ರಾಜಕುವರ ಸಿದ್ಧಾರ್ಥ ಬುದ್ಧನಾದುದು ಜನರ ನಡುವೆ ಬೆರೆತು 'ಸಾಮಾನ್ಯ'ನಾದ ಮೇಲೆಯೇ. ರಾಮಾಯಣದ ಕಥಾನಾಯಕ ರಾಮ ಪ್ರಜೆಗಳ ನಂಬಿಕೆಗೆ ಬದ್ಧನಾಗಿದ್ದ ಪುರಾಣ ಪುರುಷ. ರಾಮರಾಜ್ಯ ಎನ್ನುವುದಕ್ಕೆ ಒಳಿತು ಹಾಗೂ ಮೌಲ್ಯ ವ್ಯವಸ್ಥೆಯ ಅರ್ಥ ಮಾತ್ರವಲ್ಲ, ಜನಾಭಿಪ್ರಾಯಕ್ಕೆ ಮನ್ನಣೆ ನೀಡುವ ವ್ಯವಸ್ಥೆ ಎನ್ನುವ ಅರ್ಥವೂ ಇದೆ. ಆದರ್ಶ ಪ್ರಜಾಪ್ರಭುತ್ವದ ಮೂರ್ತರೂಪವೇ ಪ್ರಜಾಪ್ರಭುತ್ವ. ಗಾಂಧಿ ಮಹಾತ್ಮ ದೈವವನ್ನು ನಂಬುತ್ತಿದ್ದರು. ಆದರೆ, ಅವರ ದೈವದ ನಂಬಿಕೆ ವ್ಯಕ್ತಗೊಂಡಿದ್ದು ಜನಸಮೂಹದ ಕುರಿತ ಬದ್ಧತೆಯಲ್ಲಿ. ಜನಕಲ್ಯಾಣದ ದಾರಿಯಲ್ಲವರಿಗೆ ದೀನ ದುರ್ಬಲರೇ ದೇವರಾಗಿದ್ದರು. ರೋಗಿಗಳ ಉಪಚಾರವನ್ನೇ ದೈನಿಕವನ್ನಾಗಿಸಿಕೊಂಡಿದ್ದ ತಾಯಿ ತೆರೇಸಾ ಅವರದೂ ಮಹಾತ್ಮನ ದಾರಿಯೇ ಆಗಿತ್ತು. ಬುದ್ಧನಾಗಲೀ, ಬಾಪುವಾಗಲೀ, ತೆರೇಸಾ ತಾಯಿಯಾಗಲೀ– ಇವರೆಲ್ಲರ ಬದುಕಿನ ಸಾರ್ಥಕತೆಯಿರುವುದು ಜನರ ತವಕ ತಲ್ಲಣಗಳಿಗೆ ತಮ್ಮನ್ನು ತೆತ್ತುಕೊಂಡಿರುವುದರಲ್ಲಿ.

ಕೆಲವರಿಗೆ ದೇವರ ಬಗ್ಗೆ ಅಪಾರ ನಂಬಿಕೆ. ಈ ನಂಬಿಕೆ ಭಕ್ತಿಯ ರೂಪದಲ್ಲಿ ವ್ಯಕ್ತಗೊಳ್ಳುತ್ತದೆ. ಭಕ್ತಿ ತೀವ್ರವಾದಂತೆಲ್ಲ, ಜನಸಾಮಾನ್ಯರಿಂದ ಭಕ್ತ ದೂರವಾಗುತ್ತಾ ಹೋಗುತ್ತಾನೆ. ದೈವದ ಕುರಿತ ನಂಬಿಕೆಯೆಂದರೆ ಸಮಾಜದಿಂದ ವಿಮುಖಗೊಳ್ಳುವುದಲ್ಲ; ಸಮಾಜದೊಂದಿಗೆ ಹೆಚ್ಚು ತೀವ್ರವಾಗಿ ತೊಡಗಿಕೊಳ್ಳುವುದು. ಮನುಷ್ಯನನ್ನು ಒಂಟಿಯಾಗಿಸುವ ಇಲ್ಲವೇ ಮನುಷ್ಯ ಮನುಷ್ಯರ ನಡುವಿನ ನಂಬಿಕೆಯನ್ನು ತೆಳುಗೊಳಿಸುವ ಭಕ್ತಿ ಜಡರೂಪಿಯಾದುದು. ಭಕ್ತಿ ಜಡಗೊಂಡ ಸಂದರ್ಭಗಳಲ್ಲಿ ದೈವದ ಕುರಿತ ನಂಬಿಕೆಗಳು ಮೂಢನಂಬಿಕೆಗಳಾಗಿ ಬದಲಾಗುವ ಸಾಧ್ಯತೆಯಿದೆ.

'ನಂಬಿ ಕೆಟ್ಟವರಿಲ್ಲವೊ ರಂಗಯ್ಯನ, ನಂಬದೆ ಕೆಟ್ಟರೆ ಕೆಡಲಿ' ಎನ್ನುತ್ತಾರೆ ವ್ಯಾಸರಾಯರು. 'ತಂದೆತಾಯಿಯು ನೀನೆ ಬಂಧುಬಳಗವು ನೀನೆ, ಎಂದೆಂದಿಗೂ ನಿನ್ನ ನಂಬಿದೆನೋ' ಎಂದು ಪುರಂದರರು ಕೃಷ್ಣನಿಗೆ ಮೊರೆಹೋಗಿದ್ದಾರೆ. ವಚನಕಾರರಿಗೆ ಇಷ್ಟಲಿಂಗದಲ್ಲಿ ನಂಬಿಕೆ. ದೈವದಲ್ಲಿನ ಈ ನಂಬಿಕೆ ಅಥವಾ ಮೊರೆ ದಾಸರನ್ನು, ವಚನಕಾರರನ್ನು ಸಮಾಜದಿಂದ ವಿಮುಖಗೊಳಿಸಿಲ್ಲ. ಸಮಾಜದ ಜೀವಶಕ್ತಿಯಲ್ಲಿ ಅವರಿಗೆ ಅಪಾರ ನಂಬಿಕೆ. ಭಕ್ತಿಯೆನ್ನುವುದು ವೈಯಕ್ತಿಕ ಶುದ್ಧಿ ಹಾಗೂ ವೃದ್ಧಿಗೆ ಹೇಗೆ ಅಗತ್ಯವೋ ಸಮಾಜದ ಸ್ವಾಸ್ಥ್ಯಕ್ಕೂ ಅಗತ್ಯ ಎನ್ನುವ ನಂಬಿಕೆ ದಾಸರದೂ ಆಗಿತ್ತು, ಶರಣರದೂ ಆಗಿತ್ತು. ಆ ಕಾರಣದಿಂದಲೇ ಇಂದಿಗೂ ದಾಸರು, ಶರಣರು ನಮ್ಮ ಬದುಕಿಗೆ ಕಸುವು ಮತ್ತು ಚೆಲುವು ತುಂಬುವ ನಂಬಿಕೆಗಳ ರೂಪದಲ್ಲಿ ಒದಗಿಬರುತ್ತಿದ್ದಾರೆ. ಕಾಲ–ದೇಶಗಳನ್ನು ಮೀರಿ ನಮ್ಮ ನಡುವೆ ಉಳಿದುಕೊಂಡಿರುವ ಭಕ್ತಿಯ ಬಹು ದೊಡ್ಡ ಮಾದರಿಗಳು ಸಮಾಜ ವಿಜ್ಞಾನಿಗಳ ಸ್ವರೂಪ ಹೊಂದಿರುವುದನ್ನೂ ಗಮನಿಸಿದರೆ, ಅವರ ಭಕ್ತಿಯ ಆಳದಲ್ಲಿನ ಸಾಮಾಜಿಕ ಆಯಾಮ ಸ್ಪಷ್ಟವಾಗುತ್ತದೆ.

ಒಬ್ಬರು ಇನ್ನೊಬ್ಬರನ್ನು ನಂಬುವಂತೆಯೇ ನಮ್ಮ ಕುರಿತ ನಂಬಿಕೆಯೂ ಅಗತ್ಯ. ಸ್ವನಂಬಿಕೆ ಎನ್ನುವುದು ಆತ್ಮರತಿಯಲ್ಲ, ಅತಿ ಆತ್ಮವಿಶ್ವಾಸವೂ ಅಲ್ಲ. ಎಂಥ ಸಂದರ್ಭದಲ್ಲೂ ಮಾನವೀಯತೆಯನ್ನು ಬಿಟ್ಟುಕೊಡುವುದಿಲ್ಲ ಎನ್ನುವ ನಂಬಿಕೆಯದು. ಎಂಥ ಸವಾಲನ್ನಾದರೂ ಎದುರಿಸಲು ಬೇಕಾದ ಜೀವನೋತ್ಸಾಹ ದೊರಕಿಸಿಕೊಡುವ ನಂಬಿಕೆಯದು. 'ನಂಬಿ ಕೆಟ್ಟವರಿಲ್ಲ' ಎನ್ನುವ ಮಾತು ಇತರರ ಕುರಿತ ನಂಬಿಕೆಗಳಿಗೆ ಅನ್ವಯಿಸುವಂತೆಯೇ, ನಮ್ಮ ಅಂತರಂಗಕ್ಕೆ ಹೇಳಿಕೊಳ್ಳುವ ಸಮಾಧಾನದ ಮಾತೂ ಹೌದು.

■ **ಚಂಪಕಮಾಲಾ**

## ಮಾತೇ ಮುತ್ತು

- ಮತವೆಂದರೆ ದೇವರನ್ನು ಕುರಿತ ನಂಬಿಕೆ ಮತ್ತು ಆ ನಂಬಿಕೆಗೆ ಅನುಸಾರವಾದ ನಡವಳಿಕೆ.
  —ಡಿವಿಜಿ
- ಬುದ್ಧಿಯ ಜ್ಞಾನ ಬೇರೆ, ಹೃದಯದ ಜ್ಞಾನ ಬೇರೆ.
  —ಜಿ.ಪಿ. ರಾಜರತ್ನಂ
- ಅಪ್ರಿಯವಾದರೂ ಸತ್ಯವನ್ನು ಹೇಳಬೇಕಾದುದು ಹಿತೈಷಿಯ ಧರ್ಮ.
  —ಅನಕೃ
- ಪ್ರತಿಯೊಂದು ಧರ್ಮವೂ ಈ ಜಗತ್ತಿಗೆ ಪ್ರೇಮ, ಬಂಧುತ್ವದ ಸಂದೇಶವನ್ನೇ ನೀಡಿದೆ.
  —ಖಾನ್ ಅಬ್ದುಲ್ ಗಫಾರ್‌ಖಾನ್
- ನಾಳೆ ಏನೆಂಬ ಪ್ರಶ್ನೆಗಿಂತಲೂ ಇಂದು ಹೇಗೆ? ಎನ್ನುವ ಪ್ರಶ್ನೆ ನಮಗೆ ಮಹತ್ತರವಾಗಿ ಕಾಣಬೇಕು.
  —ಶಿವರಾಮ ಕಾರಂತ
- ದೇವರು ಧನ–ಅಧಿಕಾರ ಕೊಡೋದು ಜನರಿಗೆ ಉಪಕಾರ ಮಾಡಲಿ ಅಂತ. ಆದರೆ, ಮನುಷ್ಯ ಅದನ್ನು ಜನರನ್ನು ಸುಲಿಗೆ ಮಾಡಲು ಉಪಯೋಗಿಸುತ್ತಾನೆ.
  —ತರಾಸು
- ಶಕ್ತಿ, ದೈಹಿಕ ಬಲದಿಂದ ಬರುವುದಿಲ್ಲ. ಅದು ಬರುವುದು ಅದಮ್ಯ ಇಚ್ಛಾಶಕ್ತಿಯಿಂದ.
  —ಮಹಾತ್ಮ ಗಾಂಧಿ
- ಮನಸ್ಸಿದ್ದರೆ ನಾವು ಅಂದುಕೊಂಡಿರುವ ಗುರಿ ಸಾಧಿಸಬಹುದು.
  —ಬುದ್ಧ